RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**



| ಭಾಗ – III<br>Part – III | ಬೆಂಗಳೂರು,. ಬುಧವಾರ, ಅಕ್ಟೋಬರ್ ೩೦, ೨೦೧೯ (ಕಾರ್ತೀಕ ೦೮, ಶಕ ವರ್ಷ ೧೯೪೦)<br>Bengaluru, Wednesday, October 30, 2019 (Karthika 08, Shaka Varsha 1940) | ನಂ. ೯೫೯<br>No. 959 |
|---|---|---|



**ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ**

**1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ ವಿಧಿ 28(4) ರಡಿ ಅಧಿಸೂಚನೆ**

**ಸಂಖ್ಯೆ: ಸಿಐ 26 ಎಸ್‌ಪಿಕ್ಯೂ(ಇ) 2019, ಬೆಂಗಳೂರು, ದಿನಾಂಕ: 30.10.2019**

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ (1966ರ ಕರ್ನಾಟಕದ ಕಾಯ್ದೆ ಸಂಖ್ಯೆ: 18) ವಿಧಿ 28(1) ಪ್ರಕಾರ ದತ್ತವಾದ ಅಧಿಕಾರದ ಮೇರೆಗೆ ದಿನಾಂಕ: 25.06.2019 ರಂದು ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆಯಲ್ಲಿ ಪ್ರಕಟವಾಗಿರುವ ಅಧಿಸೂಚನೆ ಸಂಖ್ಯೆ: ಸಿಐ 26 ಎಸ್‌ಪಿಕ್ಯೂ(ಇ) 2019, ಬೆಂಗಳೂರು ದಿನಾಂಕ: 21.06.2019 ರ ಪ್ರಕಾರ ಸರ್ಕಾರದ ಸದರಿ ಅಧಿಸೂಚನೆಯಲ್ಲಿ ನಮೂದಿಸಲ್ಪಟ್ಟಿರುವ ಸ್ವತ್ತುಗಳ ಪ್ರದೇಶವನ್ನು ಬೆಂಗಳೂರು ಮೆಟ್ರೋ ರೈಲು ಯೋಜನೆಯ 2ನೇ ಹಂತಕ್ಕಾಗಿ **ತುಮಕೂರು ರಸ್ತೆಯ ಬೆಂಗಳೂರು ಅಂತರ ರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದ ಹತ್ತಿರ ಬಿ.ಐ.ಇ.ಸಿ ಮೆಟ್ರೋ ಸ್ಟೇಷನ್ ನಿರ್ಮಾಣದ** ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಇಚ್ಛೆಪಟ್ಟಿದೆ.

ಮೇಲ್ಕಂಡ ಅಧಿಸೂಚನೆಯ ಷೆಡ್ಯೂಲ್‌ನಲ್ಲಿ ನಮೂದಿಸಲ್ಪಟ್ಟಿರುವ ಜಮೀನುಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಲಾಗಿರುವ ಉದ್ದೇಶಕ್ಕೆ ಸ್ವಾಧೀನಪಡಿಸಿಕೊಳ್ಳಬೇಕಾಗಿರುವುದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿದೆ. ಈ ಬಗ್ಗೆ ಮೇಲ್ಕಂಡ ಕಾಯ್ದೆ ವಿಧಿ 28(3) ರ ಪ್ರಕಾರ ಆದೇಶ ಹೊರಡಿಸಲಾಗಿದೆ.

ಆದುದರಿಂದ 1966 ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ ವಿಧಿ 28(4) ರ (1966 ರ ಕರ್ನಾಟಕದ ಕಾಯ್ದೆ ಸಂಖ್ಯೆ: 18) ಮೇರೆಗೆ ದತ್ತವಾದ ಅಧಿಕಾರದ ಮೇರೆಗೆ ಕರ್ನಾಟಕ ಸರ್ಕಾರ ಈ ಕೆಳಗೆ ನಮೂದಿಸಿರುವ ಜಮೀನುಗಳನ್ನು ಅಧಿಸೂಚನೆಯಲ್ಲಿ ತಿಳಿಸಲಾಗಿರುವ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆಯೆಂದು ಈ ಮೂಲಕ ಘೋಷಿಸಲಾಗಿದೆ.

| ಕ್ರ ಸಂ | ಗುರುತಿನ ಸಂಖ್ಯೆ | ಖಾತೆದಾರರ ಹೆಸರು | ಅನುಭವದಾರರ ಹೆಸರು | ಎಲ್.ಎ. ಸಿಟಿ ಸರ್ವೆ ನಂ. | ಬಿ.ಬಿ.ಎಂ.ಪಿ./ ಮುನಿಸಿಪಲ್ ಖಾತಾ ಸಂಖ್ಯೆ | ಭೂ ಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ (ಚ.ಮೀ) | ಚಕ್ಕುಬಂದಿ | | | | ಕಟ್ಟಡ / ವಿನ್ಯಾಸಗಳ ವಿವರಗಳು |
|---|---|---|---|---|---|---|---|---|---|---|---|
| | | | | | | | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | |
| 1 | 2 | 3 | 4 | 5 | 6 | 7 | 8 | | | | 9 |
| ಬಿ.ಐ.ಇ.ಸಿ ಮೆಟ್ರೋ ಸ್ಟೇಷನ್<br>ಗ್ರಾಮ : ಮಾದಾವರ ಹೋಬಳಿ : ದಾಸನಪುರ ತಾಲ್ಲೂಕು : ಬೆಂಗಳೂರು ಉತ್ತರ ಜಿಲ್ಲೆ : ಬೆಂಗಳೂರು ನಗರ | | | | | | | | | | | |
| 1 | R3C- 55 | ಕೆ.ಐ.ಎ.ಡಿ.ಬಿ | ನಂದಿ ಎಕನಾಮಿಕ್ ಕಾರಿಡಾರ್ ಎಂಟರ್ ಪ್ರೈಸಸ್ ಲಿಮಿಟೆಡ್/ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್ ಪ್ರೈಸಸ್ (NECEL/NICE) | 35/1ಎ | – | 370.77<br>(-) 100.00(ಖ)<br>**270.77** | ಬಿ.ಐ.ಇ.ಸಿ. ರಸ್ತೆ | ಬಿಎಂಆರ್‌ಸಿಎಲ್‌ಗೆ ಭೂಸ್ವಾಧೀನ ವಾಗುತ್ತಿರುವ ಪ್ರದೇಶ | ಬಿಎಂಆರ್‌ಸಿಎಲ್‌ಗೆ ಭೂಸ್ವಾಧೀನ ವಾಗುತ್ತಿರುವ ಪ್ರದೇಶ | ರಾಷ್ಟ್ರೀಯ ಹೆದ್ದಾರಿ | ಖಾಲಿ ಜಾಗ |
| ಒಟ್ಟು | | | | | | **370.77**<br>(-) 100.00(ಖ)<br>**270.77** | | | | | |

**ಘೋಷ್ವಾರೆ**

| ಕ್ರ ಸಂ. | ಹೆಸರು | ವಿಸ್ತೀರ್ಣ (ಚ.ಮೀ. ಗಳಲ್ಲಿ) | | |
|---|---|---|---|---|
| | | ಐನು | ಖರಾಬು | ಒಟ್ಟು |
| 1. | ಬಿ.ಐ.ಇ.ಸಿ ಮೆಟ್ರೋ ಸ್ಟೇಷನ್ | 270.77 | 100.00 | 370.77 |
| ಒಟ್ಟು ವಿಸ್ತೀರ್ಣ | | 270.77 | 100.00 | 370.77 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಬಿ. ವೆಂಕಟೇಶಮೂರ್ತಿ**
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ)
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ